ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ:ಪಪೂಶಿಇ/ಪರೀಕ್ಷೆ/ದ್ವಿಪಿಯು/ಜುಲೈ-2013/2013-14. ದಿನಾಂಕ: 11-06-2013.

**ಪರಿಷ್ಕೃತ ಸುತ್ತೋಲೆ**

ದ್ವಿತೀಯ ಪಿಯುಸಿ 2013-ಮಾರ್ಚ್ ಪರೀಕ್ಷೆಯ ಉತ್ತರಪತ್ರಿಕೆಗಳ ಮರುಮೌಲ್ಯಮಾಪನದ ಫಲಿತಾಂಶವನ್ನು ದಿನಾಂಕ 10-06-2013ರಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಂತರ್‌ಜಾಲ (wesite) www.pue.kar.nic.inದಲ್ಲಿ ಪ್ರಕಟಿಸಲಾಗಿದೆ. ಮರುಮೌಲ್ಯಮಾಪನದ ನಂತರ ಕೆಲವು ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವುದನ್ನು ಪರಿಗಣಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 2013 ಜುಲೈ ದ್ವಿತೀಯ ಪಿಯುಸಿ ಪೂರಕ ಪರೀಕ್ಷಾ ಶುಲ್ಕ ಪಾವತಿಸಲು ಕಡೇ ದಿನಾಂಕವನ್ನು 15-06-2013ರವರೆಗೆ ವಿಸ್ತರಿಸಲಾಗಿದೆ. ಇಲ್ಲಿಯವರೆಗೆ ಪರೀಕ್ಷಾ ಶುಲ್ಕ ಪಾವತಿಸದೇ ಇದ್ದ ಎಲ್ಲಾ ಅನುತ್ತೀರ್ಣ ವಿದ್ಯಾರ್ಥಿಗಳು (including all previous repeaters, failed students of Mar-2013 & result rejection) ತಮ್ಮ ಕಾಲೇಜಿನಲ್ಲಿ ಶುಲ್ಕಪಾವತಿಸಿ ಅರ್ಜಿನಮೂನೆಗಳನ್ನು ಭರ್ತಿಮಾಡುವಂತೆ ತಿಳಿಸಲಾಗಿದೆ. ಯಾವುದೇ ಕಾರಣಕ್ಕೂ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕವನ್ನು ಮತ್ತೆ ವಿಸ್ತರಿಸಲಾಗುವುದಿಲ್ಲ.

ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಪೂರಕ ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದು ಖಜಾನೆಗೆ ಪಾವತಿಸಿ ದಿನಾಂಕ 17-06-2013ರಂದು ತಮ್ಮ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಉಪನಿರ್ದೇಶಕರಿಗೆ ಮೂಲ ಚಲನ್ ಹಾಗೂ ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು (OMR/MCA) ತಪ್ಪದೆ ಸಲ್ಲಿಸಲು ಸೂಚಿಸಲಾಗಿದೆ. ಜಿಲ್ಲಾ ಪದವಿ ಪೂರ್ವ ಶಿಕ್ಷಣ ಉಪನಿರ್ದೇಶಕರು ಪ್ರಾಂಶುಪಾಲರುಗಳಿಂದ ಪಡೆದ ಚಲನ್ ಮತ್ತು ಅರ್ಜಿ ನಮೂನೆಗಳನ್ನು ನಿರ್ದೇಶನಾಲಯಕ್ಕೆ ಖುದ್ದಾಗಿ ತಪ್ಪದೆ ದಿನಾಂಕ 18-06-2013ರಂದು ಸಲ್ಲಿಸುವಂತೆ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು (ಪರೀಕ್ಷೆ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಜಿಲ್ಲಾ ಉಪನಿರ್ದೇಶಕರುಗಳು, ಪಪೂಶಿಇ.
2. ಪದವಿ ಪೂವ ಶಿಕ್ಷಣ ಬೋಧಿಸುವ ಎಲ್ಲಾ ಕಾಲೇಜುಗಳ ಪ್ರಾಚಾರ್ಯರುಗಳಿಗೆ. (ಜಿಲ್ಲಾ ಉಪನಿರ್ದೇಶಕರುಗಳ ಮೂಲಕ)
3. ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, (ಅಂತರ್‌ಜಾಲದಲ್ಲಿ ಪ್ರಕಟಿಸಲು).